ರಾಜ್ಯಕ್ಕೆ ಬಂದ ಮಕ್ಕಳ ಪೋಷಕರನ್ನು ಪತ್ತೆ ಮಾಡಿ ಅವರವರ ವಶಕ್ಕೆ ಬಿಡಲಾಗಿದೆ. ಪೋಷಕರು ಪತ್ತೆ ಆಗದಿರುವ ಸಂದರ್ಭಗಳಲ್ಲಿ ಸರ್ಕಾರಿ ಸಂಸ್ಥೆಗಳಲ್ಲಿ ದಾಖಲಿಸಲಾಗಿದೆ.

ಊ) ಬಾಲ ಕಾರ್ಮಿಕರು 90 ಹಾಗೂ ಲೈಂಗಿಕ ಕಿರುಕುಳಕ್ಕೊಳ ಗಾಗಿರುವ 32 ಮಕ್ಕಳನ್ನು ರಕ್ಷಿಸಲಾಗಿದೆ.

137 ಶ್ರೀ ಸುರೇಶಗೌಡ, : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಾಗಮಂಗಲ ತಾಲ್ಲೂಕಿನ ಸಣ್ಣ ಹಿಡುವಳಿ ರೈತ ಕುಟುಂಬದವರಿಗೆ ಪ್ರಸಕ್ತ ಸಾಲಿನಲ್ಲಿ ನೀಡಲಾಗುತ್ತಿರುವ ಸಾವಿರ ರೂಪಾಯಿಗಳ ಸಹಾಯ ಧನಕ್ಕೆ ಗುರುತಿಸಲಾಗಿರುವ ರೈತರೆಷ್ಟು;

ಆ) ಈವರೆವಿಗೂ ಎಷ್ಟು ರೈತರಿಗೆ ಸಹಾಯ ಧನ ನೀಡಲಾಗಿದೆ;

ಇ) ಹಾಗಿದ್ದಲ್ಲಿ, ಎಲ್ಲಾ ಅರ್ಹ ರೈತರಿಗೆ ಎಷ್ಟು ದಿವಸದೊಳಗೆ ಸಹಾಯ ಧನ ಒದಗಿಸಲಾಗುವುದು?

ಶ್ರೀ ಎಸ್. ಎ. ರವೀಂದ್ರನಾಥ್ (ಕೃಷಿ ಸಚಿವರು) :

ಅ) 21030 ಸಣ್ಣ ಮತ್ತು ಅತಿ ಸಣ್ಣ ರೈತ ಕುಟುಂಬಗಳನ್ನು ಗುರುತಿಸಲಾಗಿದೆ.

ಆ) ಇದುವರೆಗೆ 15,276 ರೈತರಿಗೆ ಸಹಾಯಧನ ನೀಡಲಾಗಿದೆ.

ಇ) 2009ರ ಮಾರ್ಚ್ ಅಂತ್ಯದೊಳಗೆ ಎಲ್ಲಾ ಅರ್ಹ ರೈತರಿಗೆ ಸಹಾಯಧನ ಒದಗಿಸಲಾಗುವುದು.

112 ಶ್ರೀ ಸಂಗಪ್ಪಂಗಿ ಎಸ್ : ಮಾನ್ಯ ಜವಳಿ, ಯುವಜನ ಸೇವಾ ಹಾಗೂ ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಷ್ಟ್ರೀಯ ಕ್ರೀಡೆಗಳ ಅಂಗವಾಗಿ ನಿರ್ಮಾಣವಾದ ಒಳಾಂಗಣ ಕ್ರೀಡಾಂಗಣವನ್ನು ಇದುವರೆಗೂ ಯಾವ ಯಾವ ಕ್ರೀಡಾ ಉದ್ದೇಶಕ್ಕಾಗಿ ಬಳಸಿಕೊಳ್ಳಲಾಗಿದೆ. (ವಿವರಣೆ ನೀಡುವುದು)

ಆ) ಈ ಕ್ರೀಡಾಂಗಣಗಳನ್ನು ವಾಣಿಜ್ಯ ಉದ್ದೇಶಕ್ಕೆ ಬಳಸಿಕೊಳ್ಳು-ತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;